ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ಎಲ್ಲರೂ ಕುಳಿತುಕೊಳ್ಳಬೇಕು. ಮಾನ್ಯ ಬಸವರಾಜ್ ಮತ್ತು ನಿಮ್ಮಲ್ಲಿ ಒಂದು ಪ್ರಶ್ನೆ ಕೇಳಬೇಕೆಂದು ಇದ್ದೇನೆ. ನೀವು 40 ಜನ ಆರಿಸಿ ಬಂದಿದ್ದೀರಿ. ಅವರು ಒಬ್ಬರು ಆರಿಸಿ ಬಂದಿದ್ದಾರೆ. ನಿಮ್ಮ ಅಭಿಪ್ರಾಯ ವ್ಯಕ್ತಮಾಡುವುದಕ್ಕೆ ನಿಮಗೆ ಎಷ್ಟು ಅರ್ಹತೆ ಹಕ್ಕು ನೀವು ಸಂಪಾದನೆ ಮಾಡಿಕೊಂಡಿದ್ದೀರೋ ಅಷ್ಟೇ ಹಕ್ಕು ಅವರಿಗೂ ಇರುತ್ತದೆ. ನಿಮ್ಮ ಮುಖಂಡರು ಮಾತನಾಡುವಾಗ ಅವರ ಪಕ್ಷದ ಮುಖಂಡರಿಗೆ ಅನ್ವಯಿಸುವ ಹಾಗೆ ಒಂದು ಮಾತನ್ನು ಹೇಳಿದ್ದರಿಂದ ಅದಕ್ಕೆ ಅವರು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೇಳುತ್ತಾರೆ. ಏನು ಯುದ್ಧ ಮಾಡುತ್ತೀರಾ ಇಲ್ಲಿ? ಮಾತು ಮಾತಿಗೂ ನಿಮ್ಮ ನಿಮ್ಮಲ್ಲಿ, No. This is Parliamentary democracy. You have a very talented leader with you. ಅತ್ಯಂತ ಗೌರವಾಂಗಿ, ಬಹಳ ಗಂಭೀರವಾದಂತಹ ವಿಚಾರವನ್ನು ತಮ್ಮದೇ ಆದ ಶೈಲಿಯಲ್ಲಿ ಅವರು ಪ್ರತಿಪಾದನೆ ಮಾಡಿದ್ದಾರೆ. ಅದಕ್ಕೆ ಅವರು ಏನೋ ಉತ್ತರ ಹೇಳುತ್ತಿದ್ದಾರೆ. ಈ ಸದನದ ಒಂದು ಚರ್ಚೆಯ ಮಟ್ಟವನ್ನು ಮೇಲಕ್ಕೆ ಹೆಚ್ಚಿಸೋಣವೆಂದರೆ ನೀವು ಕುಸ್ತಿಗೆ ಇಳಿಯುತ್ತೀರಲ್ಲ, ಹಾಗಾದರೆ ಒಂದು ಕೆಲಸ ಮಾಡಿ, ನೀವೇ ಹೇಳಿಬಿಡಿ, ಯಾರ್ಯಾರು ಮಾತನಾಡಬೇಕು ಯಾರ್ಯಾರು ಮಾಡನಾಡಬಾರದು ಅಂತ, ನಾನು ಏಕಿರಬೇಕು ಇಲ್ಲಿ? ತಾವಾಗಿಯೇ ತಾವು ತಿಳಿದುಕೊಳ್ಳುತ್ತೀರಿ ಎಂದು ಸುಮ್ಮನೆ ಬಹಳ ಹೊತ್ತಿನಿಂದ ಕುಳಿತಿದ್ದೆ.

ಉದ್ವೇಗದ ಭರದಲ್ಲಿ ಯಾರು ಏನೇ ಮಾತನಾಡಿದರೂ ಕೂಡ ಈ ಸದನದ ಗೌರವಕ್ಕೆ ಮತ್ತು ಸಂಪ್ರದಾಯಕ್ಕೆ ವಿರುದ್ಧವಾಗಿರತಕ್ಕ ಮಾತುಗಳು ಯಾವುದೇ ಅಲ್ಲಿದ್ದರೂ ಕೂಡ ನಾನು ಕಾಳಜಿ ವಹಿಸಿ ಅದನ್ನು ಕಡಿತದಿಂದ ತೆಗೆಯತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇದನ್ನು ಇಲ್ಲಿಗೆ ಮುಕ್ತಾಯ ಮಾಡಿ.

ಗಮನ ಸೆಳೆಯುವ ಸೂಚನೆಗಳು.

(1) ಭದ್ರಾ ಬಲದಂಡೆ ಕಾಲುವೆಯ ದುರಸ್ಥಿ

ಶ್ರೀ ಎಸ್.ಎ. ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೆ, ಭದ್ರಾ ಬಲದಂಡೆ ಕಾಲುವೆಯ ದುರಸ್ಥಿ ಕೆಲಸ ನಿಧಾನವಾಗುತ್ತಿರುವುದರಿಂದ ರೈತರಿಗೆ ಉಂಟಾಗುವ ತೊಂದರೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿ) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಲಿಖಿತ ಹೇಳಿಕೆಯನ್ನು ನೀಡುತ್ತೇನೆ.

ಭದ್ರಾ ಅಣೆಕಟ್ಟಿನ ಬಳಿ ಕುಸಿದು ಬಿದ್ದ ಬಲದಂಡೆ ಕಾಲುವೆಯ ಗೈಡ್‌ವಾಲ್ ದುರಸ್ಥಿ ಕಾಮಗಾರಿಯ ಅಂಗವಾದ ಪುನರ್ ನಿರ್ಮಾಣ ಕಾರ್ಯವನ್ನು ಈಗ ಕೈಗೆತ್ತಿಕೊಳ್ಳಲಾಗಿದ್ದು, ಫೆಬ್ರವರಿ 1996ಕ್ಕೆ ಕಾರ್ಯವನ್ನು ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ. ಸದರಿ ಕಾಮಗಾರಿಗೆ ಈಗ ಹಾಗೂ ಇತರೆ ಸಾಮಗ್ರಿಗಳ ದಾಸ್ತಾನು ಇದ್ದು ಸದರಿ ಸಾಮಗ್ರಿಗಳ ಕೊರತೆ ಇರುವುದಿಲ್ಲ, ಆದರೆ ಪುನರ್ ನಿರ್ಮಾಣ ರೂಪಿಸಲಾದ ಕಾರ್ಯಕ್ರಮದ ಅನ್ವಯ ಜೂನ್ 95ರಿಂದ ಸೆಪ್ಟೆಂಬರ್ 95ರ ಅವಧಿಯ ಮಳೆಗಾಲದ ಅವಧಿಯಾಗಿರುವುದರಿಂದ ಈ ಅವಧಿಯಲ್ಲಿ ಕಾಮಗಾರಿಯ ಪ್ರಗತಿಯ ನಿಧಾನಗತಿಯಲ್ಲಿ ಸಾಗಿದೆಯೇ ಹೊರತು ಸಿಮೆಂಟ್ ಹಾಗೂ ಇತರೆ ಸಾಮಗ್ರಿಗಳ ಕೊರತೆಯಿಂದಲ್ಲ.

ಗೈಡ್‌ವಾಲನ್ನು 1952 ಅಡಿ ಮಟ್ಟದಿಂದ $2098\frac{1}{2}$ ಅಡಿ ವರೆಗೆ (ಅಂದರೆ ಒಟ್ಟು $146\frac{1}{2}$ ಅಡಿ ಎತ್ತರದವರೆಗೆ) ಪುನರ್ ನಿರ್ಮಾಣಬೇಕಾಗಿದ್ದು ಈಗಾಗಲೇ 2038 ಅಡಿ ಮಟ್ಟದವರೆಗೆ (ಅಂದರೆ 86 ಅಡಿ ಎತ್ತರದವರೆಗೆ) ಕಾಮಗಾರಿಯನ್ನು ಪುನರ್ ನಿರ್ಮಿಸಲಾಗಿದೆ. ಉಳಿದ ಭಾಗದ ಕೆಲಸವನ್ನು ನಿಗಧಿತ ವೇಳೆಯಾದ ಫೆಬ್ರವರಿ 1996ರ ಅಂತ್ಯದೊಳಗಾಗಿ ಪೂರ್ಣಗೊಳಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

12.10 ಪಿ.ಎಂ.

ಶ್ರೀ ಎಸ್.ಎ. ರವೀಂದ್ರನಾಥ : ಮಾನ್ಯ ಅಧ್ಯಕ್ಷರೆ, ಈ ಬಲ ದಂಡೆಯ ಭಾಗದಲ್ಲಿ ಎರಡು ಲಕ್ಷದ 30 ಸಾವಿರ ಎಕರೆಗೆ ನೀರು ಆಗಬೇಕು. 33 ಮೆಗವ್ಯಾಟ್ ಕರೆಂಟ್ ಸಹ ಉತ್ಪತಿಯಾಗುತ್ತದೆ ಆದರೆ 4 ವರ್ಷಗಳಿಂದ ಈ ಭಾಗದಲ್ಲಿರತಕ್ಕಂತಹ ರೈತರಿಗೆ ಭತ್ತ, ಕಬ್ಬು ಮತ್ತು ತೋಟದ ಬೆಳಿಗಳಿಗೆ ಕೊನೆಯ ಬೇಸಿಗೆಯಲ್ಲಿ ಅಂದರೆ ಮೇ ತಿಂಗಳಿನಲ್ಲಿ ನೀರಿಗೆ ತೊಂದರೆಯಾಗಿ, ಈ ವರ್ಷವೂ ಸಹ ಸಾಕಷ್ಟು ತೊಂದರೆಯಾಗಿ ಮತ್ತು ಭತ್ತವು ಸಹ 25 ಪರ್ಸೆಂಟ್ ಜೊಳ್ಳಾಗಿ ಅಲ್ಲಿರತಕ್ಕಂತಹ ರೈತರಿಗೆಲ್ಲ ಕೋಟಿಗಟ್ಟಲೆ ಅನ್ಯಾಯವಾಗಿದೆ. ಅದಕ್ಕೆ ಖರ್ಚು ಮಾಡತಕ್ಕಂತಹ ಹಣ ಕೇವಲ 5 ಕೋಟಿ ರೂ.ಗಳು. 5 ಕೋಟಿ ರೂ.ಗಳನ್ನು ಖರ್ಚುಮಾಡಿದರೆ ನೂರಾರು ಕೋಟಿ ರೂ.ಗಳು ಒಂದು ವರ್ಷಕ್ಕೆ ಟ್ಯಾಕ್ಸ್ ಕಟ್ಟುತ್ತಿದ್ದಾರೆ ನಮ್ಮಲ್ಲಿ ಈ ಹಣದ ಜೊತೆಗೆ ಪ್ರತಿ 4 ವರ್ಷದಿಂದಲೂ ಬೇಸಿಗೆ ಬೆಳಿಗೆ ಕೊನೆಯ ತಿಂಗಳಾದ ಮೇ ತಿಂಗಳಿನಲ್ಲಿ ನೀರಿನ ತೊಂದರೆಯುಂಟಾಗುವುದರಿಂದ ಪ್ರತಿವರ್ಷವು ಲಕ್ಷಾಂತರ ಕ್ವಿಂಟಾಲ್ ಭತ್ತದ ಬೆಳಿ ಹಾನಿಯಾಗುತ್ತಿದೆ.

ಆದೇ ರೀತಿ 4 ಸಕ್ಕರೆ ಕಂಪನಿಗಳು ಏನಿವೆ, ಪ್ರತಿ ಸಕ್ಕರೆ ಕಂಪನಿಯಲ್ಲಿಯೂ ಕಬ್ಬೆಲ್ಲ ಒಣಗಿ ಎರಡು ವರ್ಷದಿಂದಲೂ ನೀರಿಲ್ಲದೇ ಮೇ, ಜೂನ್, ಜುಲೈ ಈ ರೀತಿಯಾಗಿ ಎಲ್ಲಾ ಸಕ್ಕರೆ ಕಂಪನಿಗಳಲ್ಲೂ 4 ಲಕ್ಷ ಟನ್ ಕಬ್ಬು ಅರೆಯುವಂಥದ್ದು ಈ ವರ್ಷ ಒಂದು ಒಂದೂವರೆ ಲಕ್ಷ ಕಬ್ಬುನ್ನು ಅರೆಯುವಂಥದ್ದು ಆಗಿದೆ ಈ ರೀತಿಯಾಗಿ ಸಾಕಷ್ಟು ಎಲ್ಲಾ ರೀತಿಯಲ್ಲಿ ರೈತರಿಗೆ ಬಹಳ ತೊಂದರೆಯಾಗುತ್ತಿದೆ.

ಈಗ ತಾವು ಮಾಡುತಿರತಕ್ಕಂಥಹ ಕೆಲಸವನ್ನು ನೋಡಿದರೆ ಇನ್ನು 4 ವರ್ಷಗಳಾದರೂ ಸಹ ಅಲ್ಲಿಯ ಕೆಲಸ ಮುಗಿಯುವಂತಹ ಪರಿಸ್ಥಿತಿ ಇಲ್ಲ. ಎಂದು ಈ ಸದನದೊಳಗೆ ನಾನು ಹೇಳುತ್ತೇನೆ. ಮಾರ್ಚ್ ತಿಂಗಳಲ್ಲಿ ಇದರ ಬಗ್ಗೆ ಪ್ರಶ್ನೆ ಕೇಳಿದ್ದಾಗ. ಆದಷ್ಟು ಶೀಘ್ರದಲ್ಲಿಯೇ ಮಾಡುತ್ತೇವೆಂದು ಹೇಳಿದ್ದರು. ಆದರೆ ಇವತ್ತಿನ ವರೆಗೂ ಸಹ ತುರ್ತಾಗಿ ಯಾವುದೇ ಒಂದು ಕೆಲಸವನ್ನು ಮಾಡುತ್ತಿಲ್ಲ, ಅಲ್ಲಿರತಕ್ಕಂಥವರಿಗೆ ಸಿಮೆಂಟ್‌ನ ಬಗ್ಗೆ ಸಹ ಸರಿಯಾದ ವ್ಯವಸ್ಥೆಯನ್ನು ಮಾಡುತ್ತಿಲ್ಲ. ಆದ್ದರಿಂದ ಸರ್ಕಾರ ಇದರ ಕಡೆಗೆ ಗಮನ ಸೆಳೆದು ಶೀಘ್ರವಾಗಿ ಇದು ಆಗುವಂತೆ ಮಾಡಬೇಕು. ಆ ಭಾಗದಲ್ಲಿರತಕ್ಕಂತಹ 25 ಲಕ್ಷ ಏನು ರೈತರಿದ್ದಾರೆ ಅವರೆಲ್ಲರೂ ನೆಮ್ಮದಿಯಾಗಿ ಜೀವನ ಮಾಡುವ ರೀತಿಯಲ್ಲಿ ಮಾಡಬೇಕೆಂದು ನಿಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇವೆ ಇದನ್ನು ಆದಷ್ಟು ತ್ವರಿತಗತಿಯಲ್ಲಿ ಮಾಡಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಜಿ.ಹೆಚ್. ಪಟೇಲ್ : ಹಿಂದೆ ಯಾವ ಕಾರಣದಿಂದ ಕೆಲಸದಲ್ಲಿ ಸ್ವಲ್ಪ ವಿಳಂಬವಾಗಿತ್ತೋ ಅದು ನನಗೂ ಗೊತ್ತಿದೆ ಏಕೆಂದರೆ ನಾನು ಆದೇ ಪ್ರದೇಶದಲ್ಲಿ ನೀರಾವರಿಯನ್ನು ಉಪಯೋಗಿಸತಕ್ಕಂತಹ ನಾನು ಒಬ್ಬ ರೈತ. ಆದ್ದರಿಂದ ಮಾನ್ಯ ಸದಸ್ಯರ ಕಳಕಳಿ ಏನಿದೆ ಲಕ್ಷಾಂತರ ಜನ ರೈತರಿಗೆ ತೊಂದರೆಯಾಗಿದೆ ಕಾರಣದಿಂದಲೇ ಈಗ ಇಷ್ಟು ತ್ವರಿತವಾಗಿ ಕೆಲಸವನ್ನು ಮಾಡಿಸುತ್ತಿದ್ದೇವೆ ಕೆಲಸ ಆಗುತ್ತಿಲ್ಲ ಎನ್ನುವುದು

ಸರಿಯಲ್ಲ ಬಹಳ ತ್ವರಿತವಾಗಿ ಕೆಲಸವಾಗುತ್ತಿದೆ. ಯಾವುದೇ ಸಾಮಗ್ರಿಗಳ ಕೊರತೆಯಿಲ್ಲ. ಹಿಂದೆ ಸ್ವಲ್ಪ ಕುಂಠಿತವಾಗಿತ್ತು. ಅದನ್ನು ಸರಿಪಡಿಸುವುದಕ್ಕೆ ಎಷ್ಟು ವೇಗದಿಂದ ಕೆಲಸ ಮಾಡಿಸಬೇಕೋ ಅಷ್ಟು ವೇಗದಿಂದ ಕೆಲಸವನ್ನು ಮಾಡಿಸುತ್ತೇವೆ.

ಶ್ರೀ ಎಸ್.ಎ. ರವೀಂದ್ರನಾಥ್ : ಅಧ್ಯಕ್ಷರೆ, ಅಲ್ಲಿ ಶಾಂತಿಸಾಗರವೆಂದು ಒಂದು ಕೆರೆ ಇದೆ. ಆ ಕೆರೆಯ ಹಿಂದೆಯೇ ನಮ್ಮ ಜೆ.ಹೆಚ್. ಪಟೇಲ್‌ರವರ ಜಮೀನುಗಳು ಇರುವುದು. ಆದ್ದರಿಂದ ಡ್ಯಾಮ್‌ನ ಬಲದಂಡೆಯಲ್ಲಿ ಬಿದ್ದುಹೋಗಿರುವ ಭಾಗವನ್ನು ತ್ವರಿತವಾಗಿ ದುರಸ್ತಿ ಮಾಡುವುದಕ್ಕೆ ಜಾಸ್ತಿ ಚಿಂತನೆ ಮಾಡುತ್ತಿಲ್ಲ. ಏಕೆಂದರೆ ಅವರುಗಳ ಜಮೀನು ಇರುವುದು ಶಾಂತಿಸಾಗರದ ಹಿಂದೆ, ಶಾಂತಿಸಾಗರಕ್ಕೆ ಬೇಕಾದಷ್ಟು ನೀರನ್ನು ಅವರು ತುಂಬಿಸಿಕೊಂಡುಬಿಡುತ್ತಾರೆ. ಬೇಕಾದರೆ ತಾವು ಯಾವಾಗಾದರೂ ಹೋದಾಗ ನೋಡಬಹುದು. ಶಾಂತಿಸಾಗರ ಕೆರೆಯನ್ನು ಪೂರ್ಣವಾಗಿ ತುಂಬಿಸಿಕೊಳ್ಳುತ್ತಾರೆ, ಎರಡು ಬೆಳೆಗಳನ್ನು ಬೆಳೆದುಕೊಳ್ಳುತ್ತಾರೆ. ಎರಡು ವರ್ಷಗಳಾದರೂ ಸಹ ಕೆರೆಯ ನೀರು ಖಾಲಿಯಾಗುವುದಿಲ್ಲ, ಅವರ ಜಮಿನಿಗೆ ನೀರಿನ ತೊಂದರೆಯಾಗುವುದಿಲ್ಲ. ಆದರೆ, ಆ ಭಾಗದಲ್ಲಿರುವ ಸಾಮಾನ್ಯ ರೈತರಿಗೆ ಎಷ್ಟು ತೊಂದರೆಯಾಗುತ್ತದೆ ಎಂಬ ಬಗ್ಗೆ ಪರಿಶೀಲನೆ ಮಾಡಬೇಕು. ನೂರಾ ಇಪ್ಪತ್ತು ದಿವಸಗಳಲ್ಲಿ ಇಪ್ಪತ್ತು ದಿವಸ ನೀರಿಲ್ಲದಿದ್ದರೆ ಭತ್ತ, ಕಬ್ಬು ಮುಂತಾದ ಬೆಳೆಗಳು ಒಣಗಿಹೋಗಿ ರೈತರಿಗೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ತಾವು ನೋಡಬಹುದು. ಆದ್ದರಿಂದ ಈಗಲಾದರು ಉಪಮುಖ್ಯಮಂತ್ರಿಯವರು ಅದರ ಬಗ್ಗೆ ಹೆಚ್ಚು ಗಮನಹರಿಸಿ ಮೂರು ತಿಂಗಳಲ್ಲಿ ಬಲದಂಡೆಯ ದುರಸ್ತಿಯಾಗುವ ಕೆಲಸವನ್ನು ಮಾಡಬೇಕು. ಅಲ್ಲಿ ಈಗ ಮಳೆಯು ಕಡಿಮೆಯಾಗಿದೆ. ದುರಸ್ತಿಯನ್ನು ಮಾಡಲು ಈಗ ಸೂಕ್ತವಾದ ಕಾಲವಾಗಿದೆ. ತಾವು ಬೇಗ ಆ ಕೆಲಸವನ್ನು ಮಾಡಿ ಮುಗಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಅಧ್ಯಕ್ಷರೆ, ಭದ್ರಾ ಅಚ್ಚು ಕಟ್ಟು ಪ್ರದೇಶದಲ್ಲಿ ಬರುವ ಎಲ್ಲಾ ಕೆರೆಗಳನ್ನು ತುಂಬಿಸಲಾಗಿದೆ. ಆ ಕೆರೆ ತುಂಬಿದೆ, ನಮ್ಮ ಭಾಗದ ಕೆರೆ ತುಂಬಿಲ್ಲ, ಅದೇನೋ ನನ್ನ ಜಮೀನು ಬರುವ ಕೆರೆಗೆ ನೀರನ್ನು ತುಂಬಿದೆ ಎನ್ನುವ ಬಗ್ಗೆ ತಾವು ಯೋಚನೆ ಮಾಡಬಾರದು. ಅಲ್ಲಿರುವ ಎಲ್ಲಾ ರೈತರ ಹಿತರಕ್ಷಣೆ ಮಾಡುವುದು ನಮ್ಮ ಕರ್ತವ್ಯ. ಭದ್ರಾ ಜಲಾಶಯದಲ್ಲಿ ನೀರು ತುಂಬುತ್ತಿದೆ, ಅಲ್ಲಿ ತುಂಬುತ್ತಿರುವ ನೀರನ್ನು ತುಂಗಭದ್ರಾ ಡ್ಯಾಂಗೆ ಬಿಡುವುದರ ಬದಲಾಗಿ ಕೆರೆಗಳಿಗೆ ತುಂಬಿರಿ ಎಂದು ಹೇಳಿದ್ದೇವೆ. ಬಲದಂಡೆಯ ನಾಲೆಯ ಕೆಳಗಡೆಯೇ ನನ್ನ ಜಮೀನು ಇರುವುದು. ಮಾನ್ಯ ಸದಸ್ಯರೇನು ಶಾಂತಿಸಾಗರದ ಹಿಂದೆ ನನ್ನ ಜಮೀನಿದೆಯೆಂದು ತಿಳಿದುಕೊಂಡಿದ್ದಾರೆ ಅದು ತಪ್ಪು. ಬಲದಂಡೆಯ ನಾಲೆಯ ಕೆಳಗೆಯೇ ನನ್ನ ಜಮೀನು ಇರುವುದು. ಅದೇನೇ ಇರಲಿ ಇದನ್ನು ಆದಷ್ಟು ತ್ವರಿತವಾಗಿ ಕೆಲಸ ಮಾಡಿಸುತ್ತೇವೆ.

2. **ಬಾದಾಮಿ ತಾಲ್ಲೂಕು ಕೆರೂರು ಪುರಸಭಾ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿರುವುದರಿಂದ ಸಾರ್ವಜನಿಕರಿಗೆ ತೊಂದರೆ.**

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಅಧ್ಯಕ್ಷರೆ, ಬಾದಾಮಿ ತಾಲೂಕು ಕೆರೂರು ಪಟ್ಟಣದ ನೀರಿನ ಸಮಸ್ಯೆಯ ಬಗ್ಗೆ ನಗರಾಭಿವೃದ್ಧಿ ಸಚಿವರ ಗಮನಸೆಳೆಯುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಕಾಡಾ ಹಾಗೂ ಹೆಚ್.ಕೆ.ಡಿ.ಬಿ. ಸಚಿವರು) : ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

1991ರ ಜನಗಣತಿಯ ಪ್ರಕಾರ ಕೆರೂರು ಪಟ್ಟಣದ ಜನಸಂಖ್ಯೆಯು 15198 ಇದ್ದು ಪ್ರಸ್ತುತ ಜನಸಂಖ್ಯೆಯು 18000 ಇರಬಹುದು. ಹಾಲಿ ಈ ಪಟ್ಟಣಕ್ಕೆ ಕೊಳವೆ